2019 ಕ.ತೀ.ವ 320

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಪಿ. ವೆಂಕಟರಾಘವನ್ (ಅಲಿಯಾಸ್) ಕೇಶವ್ ಮತ್ತು ಇನ್ನೊಬ್ಬರು –ವಿರುದ್ಧ–
ಶ್ರೀ ಹಬಿಬ್ ಖಾನ್*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 19ನೇ ಪ್ರಕರಣ.

IIನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ಗುಲ್ಬರ್ಗಾ – ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ: 1333/2007ರಲ್ಲಿ ಆಪಾದಿತ ಸಂಖ್ಯೆ. 1 ಹಾಗೂ 2 ಎಂಬುದಾಗಿ ಗುರುತಿಸಲ್ಪಟ್ಟ, ಅರ್ಜಿದಾರರು ಸದರಿ ಪ್ರಕರಣದಲ್ಲಿನ ಇಡೀ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ, ಈ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ದಂಡ ಪ್ರಕ್ರಿಯಾ ಸಂಹಿತೆಯ 196(1)ನೇ ಪ್ರಕರಣವು ಮೂಲಾಧಾರವಾದ ನೀತಿಯಾಗಿದ್ದು, ಅದಕ್ಕೆ ಸಂಬಂಧಿಸಿ, ಮಂಜೂರಾತಿಯ ಆದೇಶವನ್ನು ನೀಡಲು, ನ್ಯಾಯಾಲಯಗಳ ಮುಂದೆ ಸುಳ್ಳು ದೂರು ದಾಖಲಾಗುತ್ತಿರುವುದನ್ನು ತಡೆಯುವ ಸಲುವಾಗಿ, ನ್ಯಾಯಾಲಯದಿಂದ ಸಂಜ್ಞೇಯತೆಯನ್ನು ಕೈಗೊಳ್ಳುವುದಕ್ಕೆ ಪೂರ್ವ ಮಂಜೂರಾತಿ ಕಡ್ಡಾಯವೆಂದು ಈ ನ್ಯಾಯಾಲಯದಿಂದ ನೀಡಲಾದ ಅಭಿಪ್ರಾಯೋಕ್ತಿಗಳ ಅರ್ಥ ಪೂರ್ಣ ತಿಳುವಳಿಕೆಯು ಸ್ಪಷ್ಟವಾಗಿ ಹೇಳುತ್ತದೆ.

ಮಾನ್ಯ ವಕೀಲರಿಂದ ಸರಿಯಾಗಿ ವಾದಿಸಲಾದಂತೆ, ಈ ನಿರ್ದಿಷ್ಟ ಪ್ರಕರಣದಲ್ಲಿ, ಸಂಗತಿಗಳನ್ನು ಉಲ್ಲೇಖಿಸುತ್ತಾ ಹೇಳುವುದಾದರೆ, ದೂರುದಾರನ ಆಕ್ಷೇಪಣಾ ಅರ್ಜಿಯ

*ಕ್ರಿ.ಅ.ಸಂ. 15632/2012, ದಿನಾಂಕ 6ನೇ ಫೆಬ್ರವರಿ, 2015.

ಆಧಾರದ ಮೇಲೆ ಸಂಜ್ಞೇಯತೆಯನ್ನು ಕೈಗೊಳ್ಳುವುದಕ್ಕಾಗಿ ಮತ್ತು ಆಪಾದಿತ ವ್ಯಕ್ತಿಗಳ ವಿರುದ್ಧ ಮಾಡಲಾದ ಆರೋಪಗಳಿಗೆ ಉತ್ತರಿಸಲು ಅವರನ್ನು ಬರಹೇಳುವುದಕ್ಕಾಗಿ ನ್ಯಾಯಾಲಯದ ವಿಶೇಷಾಧಿಕಾರವನ್ನು ಕೋರಲು ದೂರುದಾರನು ಯಾವುದೇ ಮಂಜೂರಾತಿ ಆದೇಶವನ್ನು ಖಡಾಖಂಡಿತವಾಗಿ ಪಡೆದಿಲ್ಲ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ದಂಡ ಪ್ರಕ್ರಿಯಾ ಸಂಹಿತೆಯ 196(3)ನೇ ಪ್ರಕರಣದ ಅನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ವಿಷಯವನ್ನು ತನಿಖೆಗಾಗಿ ಸಂಬಂಧಿತ ಅಧಿಕಾರ ವ್ಯಾಪ್ತಿ ಹೊಂದಿರುವ ಪೊಲೀಸರಿಗೆ ಒಪ್ಪಿಸಬೇಕು. ಈ ನಿರ್ದಿಷ್ಟ ಪ್ರಕರಣದಲ್ಲಿ, ಅಧಿಕಾರ ವ್ಯಾಪ್ತಿ ಹೊಂದಿರುವ ಪೊಲೀಸರು ಪ್ರಕರಣವನ್ನು ಈಗಾಗಲೇ ತನಿಖೆ ಮಾಡಿದ್ದಾರೆ ಮತ್ತು ದೂರುದಾರನು ದಾಖಲಿಸಿದ ಎಫ್‌ಐಆರ್ ಮೇಲೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಿದ್ದಾರೆಂಬುದನ್ನು ಇಲ್ಲಿ ಗಮನಿಸುವುದು ಸೂಕ್ತವಾಗಿದೆ. ಆದುದರಿಂದ, ಯಾವುದೇ ಭ್ರಮಾತ್ಮಕ ಮನಸ್ಥಿತಿಯಲ್ಲಿ, ಪ್ರತಿಭಟನಾ ಅರ್ಜಿಯ ಮೂಲಕ ಸಲ್ಲಿಸಿದ ದೂರನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರ ಮುಂದೆ ಪುರಸ್ಕರಿಸಲಾಗಿದೆ ಎಂದು ಹೇಳಲಾಗದು.

ಮೇಲೆ ಹೇಳಲಾದ ಕಾರಣಗಳಿಗಾಗಿ, ಅರ್ಜಿದಾರರು ಈ ವ್ಯವಹರಣೆಗಳನ್ನು ರದ್ದುಪಡಿಸಲು ಮಹತ್ವದ ಕಾರಣವನ್ನು ಹುಡುಕಿದ್ದಾರೆ. ವ್ಯವಹರಣೆಗಳ ಮುಂದುವರಿಕೆಯನ್ನು ಪುರಸ್ಕರಿಸಿದಲ್ಲಿ, ಅದು ನಿಶ್ಚಿತವಾಗಿ ನ್ಯಾಯಾಲಯದ ಕಾರ್ಯಪ್ರಕ್ರಿಯೆಯನ್ನು ನಿಂದಿಸಿದಂತಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ, ನಾನು ಈ ಮುಂದಿನಂತೆ ಆದೇಶ ಹೊರಡಿಸುತ್ತೇನೆ:

ಅರ್ಜಿಯನ್ನು ಪುರಸ್ಕರಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆ* | *ಪ್ಯಾರಾದಲ್ಲಿ* |
| --- | --- |
| *1. 2010(1) ಕೆಎಆರ್, ಎಲ್.ಜೆ.47 ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್‌ಶೇಖರ ಮತ್ತು ಇನ್ನೊಬ್ಬರು* | *(ಉಲ್ಲೇ) 6* |

ಅರ್ಜಿದಾರರ ಪರ : ಶ್ರೀ ಡಿ.ಪಿ. ಅಂಬೇಕರ್ ಮತ್ತು ಶ್ರೀ ಆರ್.ಎಸ್. ಲಗಲಿ, ವಕೀಲರು ಇವರ ಪರವಾಗಿ ಶ್ರೀ ಆರ್. ಷಣ್ಮುಗ ಸುಂದರಂ, ಹಿರಿಯ ವಕೀಲರು,

ಪ್ರತ್ಯರ್ಜಿದಾರರ ಪರ : ಶ್ರೀ ಎಂ.ಐ. ದಫೇದಾರ್, ವಕೀಲರು – ಹಾಜರಾಗಿಲ್ಲ

## ಆಜ್ಞೆ

**ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ:**

IIನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ಗುಲ್ಬರ್ಗಾ – ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ: 1333/2007ರಲ್ಲಿ ಆಪಾದಿತ ಸಂಖ್ಯೆ. 1 ಹಾಗೂ 2 ಎಂಬುದಾಗಿ ಗುರುತಿಸಲ್ಪಟ್ಟ ಅರ್ಜಿದಾರರು ಸದರಿ ಪ್ರಕರಣದಲ್ಲಿನ ಇಡೀ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ, ಈ ನ್ಯಾಯಾಲಯದ ಮೊರೆ ಹೋಗಿದ್ದಾರೆ.

2. ಪ್ರತ್ಯರ್ಜಿದಾರ ಮತ್ತು ಅವನ ವಕೀಲರು ಈ ನ್ಯಾಯಾಲಯಕ್ಕೆ ಹಾಜರಾಗಿಲ್ಲ.

3. ಅರ್ಜಿದಾರರ ಪರ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ. ಮಾನ್ಯ ಎಚ್‌ಸಿಜಿಪಿ ರವರು, ಸದರಿ ವ್ಯವಹರಣೆಗಳಿಗೆ ಪಕ್ಷಕಾರರಲ್ಲದಿದ್ದರೂ, ಅರ್ಜಿಯನ್ನು ವಿಲೇ ಮಾಡುವಲ್ಲಿ ನ್ಯಾಯಾಲಯಕ್ಕೆ ನೆರವಾಗಿದ್ದಾರೆ.

4. ದಿನಾಂಕ: 24.11.2001 ರಂದು 'ಹಿಂದು' – ಎಂಬ ಇಂಗ್ಲೀಷ್ ವಾರ್ತಾ ಪತ್ರಿಕೆಯಲ್ಲಿ "ಪಾಪ್‌ಕಾರ್ನ್" ಎಂಬ ಶೀರ್ಷಿಕೆ ಹೊಂದಿದ್ದ ಕಾರ್ಟೂನಿನಲ್ಲಿ, "ಯಂಗ್ ವರ್ಲ್ಡ್" ಎಂಬ ಸಪ್ಲಿಮೆಂಟ್ ಪತ್ರಿಕೆಯ ಭಾಗದಲ್ಲಿ ಪ್ರಕಟಣೆಯೊಂದಿತ್ತು. ಸದರಿ ಚಿತ್ರದಲ್ಲಿ "ಮೊಹಮದ್"ರ ಗುಣಗಳನ್ನು ನಿರೂಪಿಸಲಾಗಿದ್ದು, ಅದು ಮುಸ್ಲಿಂ ಬಾಂಧವರ ಭಾವನೆಗಳಿಗೆ ನೋವುಂಟು ಮಾಡುವಂತಿತ್ತು ಮತ್ತು

ಕೇಶವ ಎಂಬುವವರ ವಿರುದ್ಧ ಕ್ರಮ ಕೈಗೊಳ್ಳಲು ಕೋರಲಾಯಿತು. ಪೊಲೀಸರು, ಯುಕ್ತ ತನಿಖೆ ಮಾಡಿದ ನಂತರ, ಆ ಅಧಿಕಾರ ವ್ಯಾಪ್ತಿಗೆ ಬರುವ ಮ್ಯಾಜಿಸ್ಟ್ರೇಟರ ಮುಂದೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ದೂರುದಾರನಿಗೆ ನೋಟೀಸನ್ನು ನೀಡಲಾಗಿರುತ್ತದೆ. ಅದಕ್ಕೆ ಪ್ರತಿಯಾಗಿ ಅವನು ನ್ಯಾಯಾಲಯಕ್ಕೆ ಹಾಜರಾಗಿರುತ್ತಾನೆ ಮತ್ತು ಅವನು ಪೊಲೀಸರು ಸಲ್ಲಿಸಿದ 'ಬಿ' ವರದಿಯಿಂದ ಅಸಮಾಧಾನಗೊಂಡಿರುತ್ತಾನೆ ಹಾಗೂ ದೀರ್ಘಕಾಲ ಕಳೆದುಹೋದ ನಂತರ ಅದರ ವಿರುದ್ಧ ಪ್ರತಿಭಟನಾ ಅರ್ಜಿಯನ್ನು ಸಲ್ಲಿಸಿರುತ್ತಾನೆ ಹಾಗೂ ತಾನು ಸ್ವತಃ ಪಿಡಬ್ಲ್ಯೂ.1 ಎಂದು ವಿಚಾರಣೆಗೊಳಪಟ್ಟು, ನಿಶಾನೆ ಪಿ.1 ರಿಂದ ಪಿ.3 ರವರೆಗೆ ಗುರುತಿಸಿರುತ್ತಾನೆ. ಅಧಿವಿಚಾರಣಾ ನ್ಯಾಯಾಲಯವು, ಪ್ರತಿಭಟನಾ ಅರ್ಜಿಯನ್ನು, ಜೊತೆಗೆ ದೂರುದಾರನ ಪ್ರಮಾಣ ಮಾಡಲಾದ ಹೇಳಿಕೆಯನ್ನು, ಪರಿಶೀಲಿಸಿದ ನಂತರ, ದೂರುದಾರನಾದ ಹಬೀಬ್ ಖಾನ್ ತಾನು ಪಾಷಾಪುರ, ರೋಜಾ, ಗುಲ್ಬರ್ಗಾ – ಇಲ್ಲಿನ ನಿವಾಸಿಯೆಂದು ಮತ್ತು ತಾನೊಬ್ಬ ಸಮಾಜ ಸೇವಕನೆಂದು ಸದರಿ ನ್ಯಾಯಾಲಯದ ಮುಂದೆ ಪ್ರಮಾಣ ಮಾಡಿದ್ದಾನೆಂಬುದನ್ನು ಗಮನಿಸಿದೆ. ದಿನಾಂಕ: 24.11.2001ರ 'ಹಿಂದೂ' – ಇಂಗ್ಲೀಷ್ ದಿನಪತ್ರಿಕೆಯಲ್ಲಿ ಹೋಲಿ ಪ್ರೊಫೆಟ್ ಮೊಹಮದ್‌ರ ಬಗ್ಗೆ ವ್ಯಂಗ್ಯ ಚಿತ್ರವೊಂದು ಪ್ರಕಟವಾಗಿದ್ದು, ಅದು ಇಸ್ಲಾಂ ಧರ್ಮಕ್ಕೆ ವಿರೋಧವಾಗಿದ್ದು, ಅದರಿಂದ ಎಲ್ಲಾ ಮುಸ್ಲಿಮರ ಭಾವನೆಗಳಿಗೆ ನೋವುಂಟಾಗಿದ್ದು, ಅದು ಸಾಮರಸ್ಯ ಕಾಪಾಡಲು ಬಾಧಕವಾದ ಕೃತ್ಯವಾಗಿದೆಯೆಂದು ಆಪಾದಿಸಲಾಗಿದೆ. ಆದುದರಿಂದ, ಅವನು ನಿರ್ದಿಷ್ಟವಾಗಿ ಇದರಲ್ಲಿನ ಅರ್ಜಿದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾನೆ. ಮ್ಯಾಜಿಸ್ಟ್ರೇಟರು ಪತ್ರಿಕಾ ಪ್ರಕಟಣೆಯನ್ನು ಮತ್ತು ಪ್ರಮಾಣ ವಚನದ ಒಳಾಂಶಗಳನ್ನು ಪರಿಶೀಲಿಸಿ, ಆಪಾದಿತ ವ್ಯಕ್ತಿಗಳ ವಿರುದ್ಧ ಆದೇಶಿಕೆಯನ್ನು ಹೊರಡಿಸಲು ನಿರ್ಧರಿಸಿದ್ದಾರೆ. ಅದರಂತೆ, ಗಮನಿಸಿ ಕ್ರಮಕೈಗೊಂಡಿದ್ದಾರೆ. ತದನುಸಾರವಾಗಿ, ಅವರು ಆಪಾದಿತನಿಗೆ ಸಮನ್ಸ್ ನೀಡಿದ್ದಾರೆ. ವಾಸ್ತವವಾಗಿ, 1 ಮತ್ತು 2ನೇ ಆಪಾದಿತರು ಕರ್ತವ್ಯ ಪ್ರಜ್ಞೆಯುಳ್ಳ ನಾಗರೀಕರಾಗಿ ನ್ಯಾಯಾಲಯದ ಮುಂದೆ ಹಾಜರಾಗಿದ್ದಾರೆ ಹಾಗೂ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ, ತರುವಾಯ, ತಮ್ಮ ಹಕ್ಕಿನ ವಿಷಯವಾಗಿ ಅವರು ಇಡೀ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ ಈ ನ್ಯಾಯಾಲಯದ ಮೊರೆ ಹೋಗಿದ್ದಾರೆ.

5. ಐಪಿಸಿ ಸೆಕ್ಷನ್ 153(ಎ) ಅಪರೂಪದ ಉಪಬಂಧವಾಗಿದ್ದು, ಅದರಲ್ಲಿ, ಪೋಲೀಸರು ಯಾವುದೇ ದೂರು ಅಥವಾ ಯಾವುದೇ ಆರೋಪಪಟ್ಟಿಯನ್ನು ದಾಖಲಿಸುವ ಮುನ್ನ, ಅಂಥ ದೂರು ಅಥವಾ ಆರೋಪ ಪಟ್ಟಿಯ ಜೊತೆಯಲ್ಲಿ ದಂಡ ಪ್ರಕಿಯಾ ಸಂಹಿತೆಯ 196ನೇ ಪ್ರಕರಣದಡಿ ಸಕ್ಷಮ ಅಧಿಕಾರ ವ್ಯಾಪ್ತಿಯ ರಾಜ್ಯದಿಂದ ನೀಡಲಾದ, ಸಿಂಧುವಾದ ಮಂಜೂರಾತಿ ಆದೇಶವಿರತಕ್ಕದ್ದು ಎಂದು ಮಾನ್ಯ ಹಿರಿಯ ವಕೀಲರಾದ ಶ್ರೀ ಆರ್. ಷಣ್ಮುಗ ಸುಂದರಂ ರವರು ಈ ನ್ಯಾಯಾಲಯದ ಮುಂದೆ ಪಟ್ಟುಬಿಡದೆ ವಾದಿಸಿದ್ದಾರೆ. ಮಂಜೂರಾತಿ ಆದೇಶವಿಲ್ಲದೆಯೇ ಮಾನ್ಯ ಮ್ಯಾಜಿಸ್ಟ್ರೇಟರು ಗಮನಿಸಿ ಕ್ರಮ ಕೈಗೊಂಡಿರುವುದರಿಂದ, ಇಡೀ ವ್ಯವಹರಣೆಯು ಗಂಭೀರವಾದ, ಸರಿಪಡಿಸಲಾಗದ ನ್ಯೂನತೆಯಿಂದ ದೂಷಿತವಾಗಿದೆ. ಆದುದರಿಂದ, ಸದರಿ ವ್ಯವಹರಣೆಯು ರದ್ದುಪಡಿಸಲು ತಕ್ಕುದಾಗಿದೆಯೆಂದು ಅವರು ವಾದಿಸಿದ್ದಾರೆ.

6. ***ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್‌ಶೇಖರ ಮತ್ತು ಇನ್ನೊಬ್ಬರು***[1],ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯವನ್ನು ಸಹ ಅರ್ಜಿದಾರರ ಪರ ಮಾನ್ಯ ವಕೀಲರು ಉದ್ಧರಿಸಿದ್ದಾರೆ. ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 196ನೇ ಪ್ರಕರಣದಡಿ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ವಿಸ್ತೃತವಾಗಿ ಚರ್ಚಿಸಿದ ನಂತರ, ಮ್ಯಾಜಿಸ್ಟ್ರೇಟರ ಮುಂದೆ ಯಾವುದೇ ದೂರನ್ನು ಸಲ್ಲಿಸುವ ಮುನ್ನ, ಮಂಜೂರಾತಿಯು ನಿರುಪಾಧಿಕವಾದ ಕಾನೂನು ಅಗತ್ಯತೆಯಾಗಿದೆಯೆಂದು ಅಭಿಪ್ರಾಯಪಟ್ಟಿದ್ದು, ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದಡಿ ತನಿಖೆಗಾಗಿ ಖಾಸಗಿ ದೂರನ್ನು ಉಲ್ಲೇಖಿಸುವುದಕ್ಕೂ ಸಹ ಅಂಥ ಮಂಜೂರಾತಿ ಆದೇಶವನ್ನು ಹಾಜರುಪಡಿಸುವುದು ಆಜ್ಞಾಪಕ ಷರತ್ತಾಗಿದೆಯೆಂದು ಸಹ ಈ ನ್ಯಾಯಾಲಯವು ತೀರ್ಮಾನಿಸಿದೆ.

7. ಮೇಲೆ ಉದ್ಧರಿಸಲಾದ ನಿರ್ಣಯದ 10 ಮತ್ತು 11ನೇ ಕಂಡಿಕೆಗಳಲ್ಲಿ, ಸರ್ಕಾರವು ಅಂಥ ಮಂಜೂರಾತಿಯನ್ನು ನೀಡುವುದಕ್ಕಾಗಿನ ಗುರಿ ಮತ್ತು ಉದ್ದೇಶಕ್ಕೆ

1. 2010(1) ಕೆಎಆರ್, ಎಲ್.ಜೆ.47

ಸಂಬಂಧಿಸಿ, ಈ ನ್ಯಾಯಾಲಯವು ತನ್ನ ತೀರ್ಮಾನವನ್ನು ವ್ಯಕ್ತಪಡಿಸಿದೆ. ನನ್ನ ಅಭಿಪ್ರಾಯದಲ್ಲಿ ಸದರಿ ತೀರ್ಪಿನ ಸುಸಂಬದ್ಧ ಭಾಗವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ.

*"10. . . . . . . . ಸದ್ಯದ ಪ್ರಕರಣದಲ್ಲಿ, ಭಾರತ ದಂಡ ಸಂಹಿತೆಯ 152–ಎ, 295 ಮತ್ತು 295ಎ ಪ್ರಕರಣಗಳಡಿ ಆಪಾದಿಸಲಾದ ಅಪರಾಧಗಳು–ವಿವಿಧ ವರ್ಗಗಳ ಜನರ ನಡುವೆ ವೈಷಮ್ಯವನ್ನು ಹೆಚ್ಚಿಸುವುದಕ್ಕೆ ಮತ್ತು ಯಾವುದೇ ವರ್ಗದ ಜನರ ಧಾರ್ಮಿಕ ಭಾವನೆಗಳನ್ನು ರೊಚ್ಚಿಗೆಬ್ಬಿಸುವ ಉದ್ದೇಶಪೂರ್ವಕ ಕೃತ್ಯಗಳನ್ನೊಳಗೊಂಡಿರುವುದಕ್ಕೆ ಕಾರಣವಾಗಿದ್ದರೂ, ಮಾನ್ಯ ಅಡ್ವೊಕೇಟ್ ಜನರಲ್‌ರವರು ಎತ್ತಿ ತೋರಿಸಿರುವಂತೆ, 196(1)ನೇ ಪ್ರಕರಣವು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆಯದೆ, ಐಪಿಸಿ ಸೆಕ್ಷನ್ 153–ಎ ಅಥವಾ 295–ಎ ಅಡಿಯಲ್ಲಿ ಯಾವುದೇ ಅಪರಾಧಗಳ ಸಂಜ್ಞೇಯತೆಯನ್ನು ಯಾವುದೇ ನ್ಯಾಯಾಲಯವು ಕೈಗೊಳ್ಳತಕ್ಕದ್ದಲ್ಲ ಎಂದು ಉಪಬಂಧಿಸಿರುತ್ತದೆ.*

*11. ದಂಡ ಪ್ರಕ್ರಿಯಾ ಸಂಹಿತೆಯ 196(1)ನೇ ಪ್ರಕರಣದ ಉದ್ದೇಶವು, ಕಾನೂನು ಕ್ರಮ ಕೈಗೊಳ್ಳುವ ಮೂಲಕ ಅನಧಿಕೃತ ವ್ಯಕ್ತಿಗಳನ್ನು ರಾಜ್ಯದ ವಿಷಯಗಳಲ್ಲಿ ಮೂಗು ತೂರಿಸುವುದರಿಂದ ತಡೆಯುವುದಾಗಿದೆ ಮತ್ತು ಅಂಥ ಕಾನೂನು ಕ್ರಮಗಳನ್ನು ನೀತಿನ ಕಾರಣಗಳಿಗಾಗಿ, ಸರ್ಕಾರದ ಅಧಿಕಾರದಡಿ ಮಾತ್ರ ಕೈಗೊಳ್ಳತಕ್ಕದ್ದು. ಅಲ್ಲದೆ, ಅಪರಾಧಗಳು ಗಂಭೀರ ಹಾಗೂ ಅಸಾಧಾರಣ ಸ್ವರೂಪದ್ದಾಗಿವೆ ಹಾಗೂ ಅದು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಶಾಂತಿ ಹಾಗೂ ಸೌಹಾರ್ದಕ್ಕೆ ಸಂಬಂಧಪಡುವ ವಿಷಯಗಳೊಂದಿಗೆ ವ್ಯವಹರಿಸುತ್ತದೆ. ಆದುದರಿಂದ, ಅಂಥ*

*ಯಾವುದೇ ಅಪರಾಧವನ್ನು ಗಮನಕ್ಕೆ ತೆಗೆದುಕೊಳ್ಳುವ ಮುನ್ನ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ನೀಡಲಾದ ಪ್ರಕರಣದಲ್ಲಿ ಕೋಪಾವೇಶಗಳು ತಗ್ಗಿದ ಮೇಲೆ ಪ್ರಾಸಿಕ್ಯೂಷ್‌ನನ್ನು ದಾಖಲಿಸಿರುವುದೇ, ಮತ್ತೆ ಹೊಸದಾಗಿ ಸಿಟ್ಟಿಗೆ ಕಾರಣವಾಗಿದ್ದು, ಸರ್ಕಾರವು ಮಂಜೂರಾತಿ ನೀಡಲು ನಿರಾಕರಿಸುವ ಮೂಲಕ ಆ ಬಗ್ಗೆ ಗಮನಹರಿಸದೆ ಇದ್ದಿರಬಹುದಾದ ಸಾಧ್ಯತೆಯಿದೆ. ಹೀಗಾಗಿ, ಅಲ್ಲಿ ಒಂದು ಮೂಲಾಧಾರವಾಗಿರುವ ನೀತಿಯಿದ್ದು, ಅದು ಅಂಥ ಅಪರಾಧದ ಸಂಜ್ಞೇಯತೆಗೆ ಮುನ್ನ ಪೂರ್ವ ಮಂಜೂರಾತಿ ಪಡೆಯುವುದು, ಕಡ್ಡಾಯವಾಗಿರುವುದಕ್ಕೆ ಸಂಬಂಧಿಸಿ, 196(1)ನೇ ಪ್ರಕರಣದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾದ ಅಪರಾಧಗಳ ಕುರಿತಾದ ಓದುವಿಕೆಗೆ ಸಾಕ್ಷಿಯಾಗಿದೆ. ಅಲ್ಲದೆ, 196ನೇ ಪ್ರಕರಣದ 3ನೇ ಉಪಪ್ರಕರಣದಡಿ, ಮಂಜೂರಾತಿ ನೀಡುವ ಮುನ್ನ ರಾಜ್ಯ ಸರ್ಕಾರವು, ಒಬ್ಬ ಪೊಲೀಸ್ ಅಧಿಕಾರಿಯಿಂದ ಒಂದು ಪ್ರಾರಂಭಿಕ ತನಿಖೆಯಾಗಬೇಕೆಂದು ಆದೇಶಿಸಬಹುದೆಂದು ಹೇಳಲಾಗಿದೆ. ಇದು ಯಾವುದೇ ನಿರ್ದಿಷ್ಟ ಘಟನೆಗೆ ಸಂಬಂಧಿಸಿ, ರಾಜ್ಯ ಸರ್ಕಾರವು ಅಂಗೀಕರಿಸಬೇಕಾದ ಕ್ರಮದ ಆಧಾರದ ಮೇಲೆ ಸ್ಪಷ್ಟವಾಗಿ ನಿರ್ಧರಿಸುವುದಕ್ಕೆ ಸೂಕ್ತವಾದುದಾಗಿದೆ ಮತ್ತು ಈ ಕಾರಣದಿಂದ, ಇಂಥದೊಂದು ಅತಿ ಮಹತ್ವದ ನಿರ್ಣಾಯಕ ಕ್ರಮವನ್ನು, ಹಾಗೆಯೇ ತಳ್ಳಿಹಾಕಲಾಗುವುದಿಲ್ಲ."*

8. ದಂಡ ಪ್ರಕ್ರಿಯಾ ಸಂಹಿತೆಯ 196(1)ನೇ ಪ್ರಕರಣವು ಮೂಲಾಧಾರವಾದ ನೀತಿಯಾಗಿದ್ದು, ಅದಕ್ಕೆ ಸಂಬಂಧಿಸಿ, ಮಂಜೂರಾತಿಯ ಆದೇಶವನ್ನು ನೀಡಲು, ನ್ಯಾಯಾಲಯಗಳ ಮುಂದೆ ಸುಳ್ಳು ದೂರು ದಾಖಲಾಗುತ್ತಿರುವುದನ್ನು ತಡೆಯುವ ಸಲುವಾಗಿ, ನ್ಯಾಯಾಲಯದಿಂದ ಸಂಜ್ಞೇಯತೆಯನ್ನು ಕೈಗೊಳ್ಳುವುದಕ್ಕೆ ಪೂರ್ವ

ಮಂಜೂರಾತಿ ಕಡ್ಡಾಯವೆಂದು ಈ ನ್ಯಾಯಾಲಯದಿಂದ ನೀಡಲಾದ ಅಭಿಪ್ರಾಯೋಕ್ತಿಗಳ ಅರ್ಥ ಪೂರ್ಣ ತಿಳುವಳಿಕೆಯು ಸ್ಪಷ್ಟವಾಗಿ ಹೇಳುತ್ತದೆ.

9. ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರ, ಮಂಜೂರಾತಿ ನೀಡಬೇಕೆ? ಅಥವಾ ಬೇಡವೇ? ಎಂಬುದನ್ನು ಸಂದರ್ಭ–ಸನ್ನಿವೇಶಗಳಡಿ, ತಮ್ಮ ವಿವೇಚನೆಯನ್ನು ಅನ್ವಯಿಸಿ, ತೀರ್ಮಾನಿಸಬೇಕಾಗುತ್ತದೆ. ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 196(1)ನೇ ಪ್ರಕರಣದಡಿ ನೀಡಲಾದ ಸಹಾಯ ಹಸ್ತವನ್ನು 'ಐಡಲ್ ಫಾರ್ಮ್ಯಾಲಿಟಿ' ಎಂದು ಕರೆಯಲಾದ ಯಾವುದೇ ಭ್ರಮಾತ್ಮಕ ಸ್ಥಿತಿಗೆ ಚಾಚಲಾಗದು. ತರುವಾಯದ ಎಲ್ಲಾ ಕ್ರಮಗಳು ನಿಶ್ಚಿತವಾಗಿ ವ್ಯವಹರಣೆಗಳು ನಿರರ್ಥಕವಾಗಿ ಪರಿಣಮಿಸದಿದ್ದಲ್ಲಿ, ದೂರುದಾರನು ನ್ಯಾಯಾಲಯಕ್ಕೆ ಮಂಜೂರಾತಿ ಆದೇಶವನ್ನು ಸಲ್ಲಿಸಬೇಕೆಂದು ಕೋರುವುದು ಆಪಾದಿತನ ಮಹತ್ವದ ಹಕ್ಕಾಗಿದೆ. ಈ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 196ನೇ ಪ್ರಕರಣವನ್ನು, ಅದರ ಸರಿಯಾದ ದೃಷ್ಟಿಕೋನದಿಂದ ಓದಿದಲ್ಲಿ, ಅದೊಂದು ಕಡ್ಡಾಯವಾದ ಅಗತ್ಯತೆಯಾಗಿದೆಯೆಂದು ಸ್ಪಷ್ಟವಾಗಿ ಸೂಚಿಸುತ್ತದೆ. ಏಕೆಂದರೆ ಆ ಉಪಬಂಧವೇ 'ಏನೇ ಇದ್ದರೂ' ಎಂಬ ಖಂಡದೊಂದಿಗೆ ಈ ಮುಂದಿನಂತೆ ಪ್ರಾರಂಭವಾಗುತ್ತದೆ.

> *''ಯಾವುದೇ ನ್ಯಾಯಾಲಯವು ಈ ಮುಂದಿನವುಗಳ ಸಂಜ್ಞೇಯತೆಯನ್ನು ಕೈಗೊಳ್ಳತಕ್ಕದ್ದಲ್ಲ,–*
>
> *''(ಎ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಹಿಂದೆ ನೀಡಿದ ಮಂಜೂರಾತಿಯನ್ನು ಹೊರತುಪಡಿಸಿ, ಅಧ್ಯಾಯ–VIರಡಿ ಅಥವಾ 153(ಎ) ಪ್ರಕರಣದಡಿ, [ಭಾರತೀಯ ದಂಡ ಸಂಹಿತೆಯ 295(ಎ) ಪ್ರಕರಣ ಅಥವಾ (505)ನೇ ಪ್ರಕರಣದ (1)ನೇ ಉಪಪ್ರಕರಣದಡಿ] ದಂಡನೀಯವಾದ ಯಾವುದೇ ಅಪರಾಧ.''*

ದಂಡ ಪ್ರಕ್ರಿಯಾ ಸಂಹಿತೆಯ 196ನೇ ಪ್ರಕರಣದ (3)ನೇ ಉಪಪ್ರಕರಣವು, ಅಂಥ ಮಂಜೂರಾತಿಯನ್ನು ನೀಡುವ ಮುನ್ನ ಯಾವ ಪ್ರಾರಂಭಿಕ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಹೊಣೆಗಾರಿಕೆಯನ್ನು ಸಹ ಸೂಚಿಸುತ್ತದೆ.

> *"**196(3)ನೇ ಪ್ರಕರಣ:** ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, (1)ನೇ ಉಪಪ್ರಕರಣ ಅಥವಾ (1ಎ) ಉಪಪ್ರಕರಣದಡಿ ಮಂಜೂರಾತಿ ನೀಡುವ ಮುನ್ನ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರು, (1ಎ) ಉಪಪ್ರಕರಣದಡಿ ಮಂಜೂರಾತಿ ನೀಡುವ ಮುನ್ನ ಹಾಗೂ ರಾಜ್ಯ ಸರ್ಕಾರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು (2)ನೇ ಉಪಪ್ರಕರಣದಡಿ ಒಪ್ಪಿಗೆ ನೀಡುವ ಮುನ್ನ, ಇನ್ಸ್‌ಪೆಕ್ಟರ್ ದರ್ಜೆಗಿಂತ ಕೆಳಗಿನ ದರ್ಜೆಯಾಗಿರದ ಪೊಲೀಸ್ ಅಧಿಕಾರಿಯಿಂದ ಪ್ರಾರಂಭಿಕ ತನಿಖೆಗೆ ಆದೇಶಿಸತಕ್ಕದ್ದು. ಅಂಥ ಸಂದರ್ಭದಲ್ಲಿ, ಅಂಥ ಪೊಲೀಸ್ ಅಧಿಕಾರಿಯು 155ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಗಳನ್ನು ಹೊಂದಿರತಕ್ಕದ್ದು."*

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಮೇಲೆ ಅವಲಂಬಿಸಿ, ಮಂಜೂರಾತಿ ನೀಡುವುದು ಅತ್ಯಂತ ಅಗತ್ಯವಾಗಿದೆಯೆಂದು ಖಚಿತಪಡಿಸಲೇಬೇಕೆನ್ನುವಷ್ಟರಮಟ್ಟಿಗೆ ಆಪಾದಿತ ವ್ಯಕ್ತಿಗಳಿಗೆ ರಕ್ಷಣೆ ನೀಡಲಾಗಿದೆಯೆಂದು ಈ ಉಪಬಂಧವು ಸ್ಪಷ್ಟಪಡಿಸುತ್ತದೆ. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಮಂಜೂರಾತಿ ನೀಡುವ ಮುನ್ನ, ಆಪಾದಿತ ವ್ಯಕ್ತಿಗಳು ಅಪರಾಧ ಎಸಗಿರುವುದನ್ನು ಪ್ರಾರಂಭಿಕ ತನಿಖೆಯು ಬಹಿರಂಗಗೊಳಿಸುತ್ತದೆಂದು ಮನದಟ್ಟು ಮಾಡಿಕೊಂಡಿರತಕ್ಕದ್ದು ಎಂದು ಉಪಬಂಧದಡಿ ಉದ್ದೇಶಿಸಲಾದ ಪ್ರಾರಂಭಿಕ ತನಿಖೆಯು ತಿಳಿಯಪಡಿಸುತ್ತದೆ. ಆದುದರಿಂದ, ಕಟ್ಟುನಿಟ್ಟಾಗಿ ಹೇಳಬೇಕೆಂದರೆ, ಸದರಿ ಉಪಬಂಧವು ನಿರಂಕುಶವಾದ ಹಾಗೂ ಕಡ್ಡಾಯವಾದ

ಕಾನೂನಿನ ಅಗತ್ಯತೆಯಾಗಿದ್ದು, ಅದು ಯಾರಿಂದಲೇ ಆಗಲಿ, ಸುಳ್ಳು ದೋಷಾರೋಪಣೆಯಲ್ಲಿ ಸಿಕ್ಕಿಸುವುದರಿಂದ ಆಪಾದಿತ ವ್ಯಕ್ತಿಗಳನ್ನು ರಕ್ಷಿಸುತ್ತದೆ.

10. ಮಾನ್ಯ ವಕೀಲರಿಂದ ಸರಿಯಾಗಿ ವಾದಿಸಲಾದಂತೆ, ಈ ನಿರ್ದಿಷ್ಟ ಪ್ರಕರಣದಲ್ಲಿ, ಸಂಗತಿಗಳನ್ನು ಉಲ್ಲೇಖಿಸುತ್ತಾ ಹೇಳುವುದಾದರೆ, ದೂರುದಾರನ ಆಕ್ಷೇಪಣಾ ಅರ್ಜಿಯ ಆಧಾರದ ಮೇಲೆ ಸಂಜ್ಞೇಯತೆಯನ್ನು ಕೈಗೊಳ್ಳುವುದಕ್ಕಾಗಿ ಮತ್ತು ಆಪಾದಿತ ವ್ಯಕ್ತಿಗಳ ವಿರುದ್ಧ ಮಾಡಲಾದ ಆರೋಪಗಳಿಗೆ ಉತ್ತರಿಸಲು ಅವರನ್ನು ಬರಹೇಳುವುದಕ್ಕಾಗಿ ನ್ಯಾಯಾಲಯದ ವಿಶೇಷಾಧಿಕಾರವನ್ನು ಕೋರಲು ದೂರುದಾರನು ಯಾವುದೇ ಮಂಜೂರಾತಿ ಆದೇಶವನ್ನು ಖಡಾಖಂಡಿತವಾಗಿ ಪಡೆದಿಲ್ಲ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ದಂಡ ಪ್ರಕ್ರಿಯಾ ಸಂಹಿತೆಯ 196(3)ನೇ ಪ್ರಕರಣದ ಅನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ವಿಷಯವನ್ನು ತನಿಖೆಗಾಗಿ ಸಂಬಂಧಿತ ಅಧಿಕಾರ ವ್ಯಾಪ್ತಿ ಹೊಂದಿರುವ ಪೊಲೀಸರಿಗೆ ಒಪ್ಪಿಸಬೇಕು. ಈ ನಿರ್ದಿಷ್ಟ ಪ್ರಕರಣದಲ್ಲಿ, ಅಧಿಕಾರ ವ್ಯಾಪ್ತಿ ಹೊಂದಿರುವ ಪೊಲೀಸರು ಪ್ರಕರಣವನ್ನು ಈಗಾಗಲೇ ತನಿಖೆ ಮಾಡಿದ್ದಾರೆ ಮತ್ತು ದೂರುದಾರನು ದಾಖಲಿಸಿದ ಎಫ್‌ಐಆರ್ ಮೇಲೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಿದ್ದಾರೆಂಬುದನ್ನು ಇಲ್ಲಿ ಗಮನಿಸುವುದು ಸೂಕ್ತವಾಗಿದೆ. ಆದುದರಿಂದ, ಯಾವುದೇ ಭ್ರಮಾತ್ಮಕ ಮನಸ್ಥಿತಿಯಲ್ಲಿ, ಪ್ರತಿಭಟನಾ ಅರ್ಜಿಯ ಮೂಲಕ ಸಲ್ಲಿಸಿದ ದೂರನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರ ಮುಂದೆ ಪುರಸ್ಕರಿಸಲಾಗಿದೆ ಎಂದು ಹೇಳಲಾಗದು.

11. ಮೇಲೆ ಹೇಳಲಾದ ಕಾರಣಗಳಿಗಾಗಿ, ಅರ್ಜಿದಾರರು ಈ ವ್ಯವಹರಣೆಗಳನ್ನು ರದ್ದುಪಡಿಸಲು ಮಹತ್ವದ ಕಾರಣವನ್ನು ಹುಡುಕಿದ್ದಾರೆ. ವ್ಯವಹರಣೆಗಳ ಮುಂದುವರಿಕೆಯನ್ನು ಪುರಸ್ಕರಿಸಿದಲ್ಲಿ, ಅದು ನಿಶ್ಚಿತವಾಗಿ ನ್ಯಾಯಾಲಯದ ಕಾರ್ಯಪ್ರಕ್ರಿಯೆಯನ್ನು ನಿಂದಿಸಿದಂತಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ, ನಾನು ಈ ಮುಂದಿನಂತೆ ಆದೇಶ ಹೊರಡಿಸುತ್ತೇನೆ:

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿ ಸಲ್ಲಿಸಲಾದ ಅರ್ಜಿಯನ್ನು ಪುರಸ್ಕರಿಸಲಾಗಿದೆ. ತದನುಸಾರವಾಗಿ, ಗುಲ್ಬರ್ಗಾದ IIನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆಎಂಎಫ್‌ಸಿ–ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಸಿ.ಸಿ. ಸಂಖ್ಯೆ: 1333/2007ರಲ್ಲಿನ ಎಲ್ಲಾ ಮುಂದಿನ ವ್ಯವಹರಣೆಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.